**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ.824/2013**

| | | |
|---|---|---|
| ಹೆಸರು | ಃ | ಗುರುದೇವ ನಾಯ್ಡು |
| ತಂದೆ ಹೆಸರು | ಃ | ಲೇಟ್ ವೆಂಕಟಪ್ಪನಾಯ್ಡು |
| ವಯಸ್ಸು | ಃ | 67 |
| ಉದ್ಯೋಗ | ಃ | ನಿವೃತ್ತ ಎಎಸ್‌ಐ |
| ವಾಸ | ಃ | ರಾಮಚಂದ್ರಪುರ |

CW-8, PW-4

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 19.04.2024**

**ಮುಖ್ಯ ವಿಚಾರಣೆ ಃ ಎಪಿಪಿಯುವರಿಂದಃ**

ನಾನು 2012 ರಿಂದ 2017 ರ ವರೆಗೆ ಬಾಗಲೂರು ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 26.11.2012 ರಂದು ನಾನು ರಾತ್ರಿ ಸಮಯದಲ್ಲಿ ಠಾಣ ಪ್ರಭಾರದಲ್ಲಿದ್ದಾಗ ಮಧ್ಯರಾತ್ರಿ 12.30-01.00 ಗಂಟೆ ಸಮಯದಲ್ಲಿ ಚಾಸಾ-1 ರವರು ನೀಡಿದ ದೂರನ್ನು ಪಡೆದುಕೊಂಡು ನಮ್ಮ ಠಾಣ ಮೊಕ್ಕದ್ದಮೆ ಸಂಖ್ಯೆ.147/2012 ರಂತೆ ಪ್ರ.ವ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಪ್ರ.ವ ವರದಿಯನ್ನು ನಿಪಿ-4 ಎಂದು, ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್ ಆರ್ ವಕೀಲರಿಂದಃ**

ಚಾಸಾ-1 ರವರನ್ನು ಹೊರತು ಪಡಿಸಿ ದೂರು ನೀಡಲು ಯಾರು ಬಂದಿರಲಿಲ್ಲ. ನಿಪಿ-1 ನ್ನು ಚಾಸಾ-1 ರವರೇ ಬರೆದು ಕೊಂಡು ಬಂದಿದ್ದರು. ಯಾವುದೇ ಗಲಾಟೆಯಾಗದೇ ಇದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ದೂರು ಪಡೆದುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**
**ಸಿಸಿ ನಂ.824/2013**

| | | |
|---|---|---|
| ಹೆಸರು | ః | ಅಂಬರೀಶ್ |
| ತಂದೆ ಹೆಸರು | ః | ಮುನಿರಾಜು |
| ವಯಸ್ಸು | ః | 39 |
| ಉದ್ಯೋಗ | ః | ಚಾಲಕ |
| ವಾಸ | ః | ಬಾಗಲೂರು |

CW-3, PW-5

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 19.04.2024**

**ಮುಖ್ಯ ವಿಚಾರಣೆ ః ಎಪಿಪಿಯವರಿಂದಃ**

ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಾಕ್ಷಿಯ ಸಹಿಯನ್ನು ಅದನ್ನು 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಬಾಗಲೂರು ಬಸ್ ನಿಲ್ದಾಣದಲ್ಲಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಈ ಗಲಾಟೆ ನೋಡಿರುವುದಿಲ್ಲ. ಪೆ ೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ವಿನಂತಿಸಿದ್ದು, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿಃ25.11.2012 ರಂದು ನಾನು ಕೆಲಸ ಮುಗಿಸಿಕೊಂಡು ನಮ್ಮ ಗ್ರಾಮದಲ್ಲಿರುವ ಪಾಲ್ಕ್( ಬಾರ್ ಗೆ ಹೋಗಿದ್ದೆ ಎಂದರೆ ಸರಿಯಲ್ಲ. ರಾತ್ರಿ 09.00 ಗಂಟೆ ಸಮಯದಲ್ಲಿ ಚಾಸಾ-1 ರವರ ತಮ್ಮ ಬಾರ್ ಗೆ ಬಂದಿದ್ದು ಆತನು ನಮ್ಮ ಸಮಕ್ಷಮದಲ್ಲಿ ಮಧ್ಯಪಾನ ಮಾಡುತ್ತಿರುವಾಗ ಆರೋಪಿಯು ಸಹ ಸದರಿ ಬಾರ್ ಗೆ ಬಂದಿದ್ದನು ಎಂದರೆ ಸರಿಯಲ್ಲ. ನಂತರ ಚಾಸಾ-2 ರವರು ಮೂತ್ರ ವಿಸರ್ಜನೆ ಗೆ ಹೊರಗೆ ಹೋದಾಗ ಆರೋಪಿಯು ಅವನನ್ನು ಹಿಂಬಾಲಿಸಿಕೊಂಡು ಹೋಗಿ ಹಳೆ ದ್ವೇಷದ ಹಿನ್ನಲೆಯಲ್ಲಿ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿದನು ಎಂದರೆ ಸರಿಯಲ್ಲ. ಆಗ ಚಾಸಾ-2 ರವರಿಗೆ ರಕ್ತ ಗಾಯ ಆಯಿತು ಎಂದರೆ ಸರಿಯಲ್ಲ. ನಂತರ ಚಾಸಾ-2 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಸಂಬಬಂದ ಚಾಸಾ-1 ರವರು ದೂರು ನೀಡಿದ್ದು ಅದರ ಸಲುವಾಗಿ ಪೋಲಿಸರು ದಿಃ26.11.2016 ರಂದು ಘಟನಾ ನೆಡೆದ ಜಾಗಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಅಲ್ಲಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮದಲ್ಲಿ ನಿಪಿ-2 ಮಹಜರ್ ಬರೆದು

ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಹಲ್ಲೆಗೆ ಉಪಯೋಗಿಸಿದ್ದ ಬಿಯರ್ ಬಾಟಲಿಯನ್ನು ಸ್ವಾದೀನ ಪಡಿಸಿದರು ಎಂದರೆ ಸರಿಯಲ್ಲ. ಈ ಸಂಬದ ನಾನು ದಿಃ08.11.2012 ರಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**